# ಟಿವಿ ನಟನೆ ಖುಷಿಗಾಗಿ

## ಪದ್ಮಜಾರಾವ್

### ಸ್ಟಾರ್‌ಸುವರ್ಣದ ‘ಜಾನಕಿ ರಾಘವ’ದ ಸುನಂದಾ



★ *ನಿಮ್ಮ ಪಾತ್ರ ಏನು? ಕಥೆ ಏನು ಹೇಳುತ್ತದೆ?*

ವಾಸ್ತವದಲ್ಲಿ ನನ್ನ ಸ್ವಭಾವಕ್ಕೆ ವಿರುದ್ಧವಾದ ಪಾತ್ರ. ನನ್ನ ಮುಂದಿನ ದೊಡ್ಡ ಸವಾಲು ಕೂಡ ಹೌದು. ಕಥಾನಾಯಕಿಗೆ ತಾಯಿ ಆಗಿದ್ದೇನೆ. ನನ್ನ ಮಗಳು ಜಾನಕಿಗೆ ಶ್ರೀರಾಮನದೇ ಧ್ಯಾನ. ರಾಮನ ಹುಡುಕಾಟದಲ್ಲಿ ಇರುವ ಹುಡುಗಿ. ಸಮಕಾಲೀನ ವಯಸ್ಕ ಹುಡುಗಿಯರಿಗಿಲ್ಲದ ನಡವಳಿಕೆ ಅವಳಿಗಿದೆ. ಕೂತರೂ, ನಿಂತರೂ ರಾಮ ನಾಮಸ್ಮರಣೆ. ವಯಸ್ಸಲ್ಲದ ವಯಸ್ಸಿನಲ್ಲಿ ಅಧ್ಯಾತ್ಮದ ಹುಚ್ಚು ಏಕೆ ಹಿಡಿಯಿತು ಎನ್ನುವುದು ತಾಯಿಯಾದ ನನ್ನ ಆತಂಕ. ಕೂತಲ್ಲಿ ನಿಂತಲ್ಲಿ ರಾಮ ಜಪ ಮಾಡುವ ಜಾನಕಿಯನ್ನು ನಿಯಂತ್ರಿಸಲು ಆಕೆಗೆ ಶಪಿಸುವುದು ನಿತ್ಯದ ಕಾಯಕ. ಆದರೆ, ನಾನು ಮಾತ್ರ ಪೂಜೆ, ಪುನಸ್ಕಾರವನ್ನು ಮಾಡುತ್ತೇನೆ. ಹಾಗಾದರೆ ಮಗಳಿಗೇಕೆ ಬೈಯುತ್ತೇನೆ. ಎಂದರೆ ಹಿಂದೊಮ್ಮೆ ಅವಳು ದೇವರನ್ನು ಹುಡುಕಿಕೊಂಡು ಹೋಗಿದ್ದಳು. ಅವಳಿಗೆ ಲೌಕಿಕ ಬದುಕಿನತ್ತ ದೃಷ್ಟಿ ಹರಿಸುವಂತೆ ಮಾಡಬೇಕು. ಎಲ್ಲರಂತೆ ನನ್ನ ಮಗಳೂ ಬದುಕಬೇಕು ಎನ್ನುವ ಬಯಕೆ ನನ್ನದು.

★ *ದೀರ್ಘ ಕಾಲದ ನಂತರ ಕಿರುತೆರೆಯಲ್ಲಿ ಕಾಣಿಸುತ್ತಿದ್ದೀರಿ...*

ಸುಮಾರು ಏಳೆಂಟು ವರ್ಷಗಳಿಂದ ಈ ಕಡೆ ಬರಲು ಸಾಧ್ಯವಾಗಲಿಲ್ಲ. ‘ಮೂಡಲ ಮನೆ’ ಪ್ರವೇಶ ಮಾಡಿದ ನಾನು ‘ಪ್ರೀತಿ ಇಲ್ಲದ ಮೇಲೆ’ನಲ್ಲಿ ನಟಿಸಿದೆ. ಅವು ನನಗೆ ತುಂಬಾ ಜನಪ್ರಿಯತೆಯನ್ನು ತಂದುಕೊಟ್ಟವು. ಸಿನಿಮಾಗಳಲ್ಲಿ ಅವಕಾಶ ಸಿಕ್ಕಿತು. ‘ಮುಂಗಾರು ಮಳೆ’ ಸಿನಿಮಾ ಸೂಪರ್ ಹಿಟ್ ಆದ ಮೇಲೆ ಬಿಡುವಿಲ್ಲದಂತೆ ಒಂದಾದ ಮೇಲೆ ಒಂದು ಸಿನಿಮಾಗಳು ಬಂದವು. ಅಲ್ಲಿ ಏಕೋ ಏಕತಾನತೆ ಕಾಡಲು ಶುರುವಾಯಿತು. ಅಮ್ಮನ ಪಾತ್ರಗಳ ಸರಣಿ. ಅಲ್ಲಿ ಖುಷಿಗಿಂತ ದುಡಿಮೆ ಹೆಚ್ಚಿದೆ ಎಂದು ತೊಡಗಬೇಕಿತ್ತು. ಆದರೆ ನನ್ನ ಮನಸ್ಸಿಗೆ ಖುಷಿ ಬೇಕಿತ್ತು. ಏಕರೂಪ ಪಾತ್ರದಿಂದ ವಿಮೋಚನೆ ಒಂದು ಪ್ರಮುಖ ಕಾರಣ. ವಿನು ಬಳಂಜ ನಿರ್ದೇಶನದ ‘ಜಾನಕಿ ರಾಘವ’ದಲ್ಲಿ ಅವಕಾಶ ಸಿಕ್ಕಿತು. ಬಳಂಜ ಅವರ ಜೊತೆ ಈ ಹಿಂದೆಯೂ ಕೆಲಸ ಮಾಡಿದ್ದೆ. ಅವರು ಪ್ರತಿ ಪಾತ್ರಕ್ಕೂ ಕೊಡುವ ಪ್ರಾಮುಖ್ಯತೆ ನನಗೆ ಇಷ್ಟ ಆಗಿತ್ತು. ಇದು ಕಿರುತೆರೆಗೆ ಮತ್ತೆ ಬರಲು ಎರಡನೇ ಕಾರಣ.

★ *ನಟಿಯಾಗುವ ಕನಸು ನನಸಾಗಿದ್ದು ಯಾವಾಗ?*

ನನ್ನ ಮಟ್ಟಿಗೆ ತುಂಬಾ ತಡವಾಯಿತು. ತೀರಾ ಸಂಪ್ರದಾಯಸ್ಥ ಮಾಧ್ವ ಕುಟುಂಬ ನಮ್ಮದು. ಬಾಲ್ಯದಿಂದಲೂ ನಟಿಯಾಗುವ ಬಯಕೆ ಮಾತ್ರ ನನಲ್ಲಿ ಹೇಗೋ ಚಿಗುರಿತ್ತು. ಆದರೆ ಅದಕ್ಕೆ ಪೋಷಕರ ಪೋಷಣೆ ಮಾತ್ರ ಸಿಗಲೇ ಇಲ್ಲ. ಬಾಲ್ಯದ ನನ್ನ ಬಯಕೆ ಈಡೇರಿದ್ದು ನನ್ನ ಮೂವತ್ತೆರಡನೇ ವಯಸ್ಸಿನಲ್ಲಿ. ಅಷ್ಟರಲ್ಲಿ ನನಗೆ ಮಗ ಕೂಡ ಹುಟ್ಟಿದ್ದ. ಮುದುವೆಯಾದ ನಂತರ ಅದಕ್ಕೆ ನಮ್ಮ ಮನೆಯವರು ಅವಕಾಶ ಮಾಡಿಕೊಟ್ಟರು. ನಟನೆಯ ಅನುಭವ ಇಲ್ಲ, ದುಡ್ಡಿಲ್ಲ, ಶೀಫಾರಸ್ಸುಗಳಿಲ್ಲ, ರಂಗಭೂಮಿ ಗೊತ್ತಿಲ್ಲ ಇಷ್ಟೆಲ್ಲಾ ಇಲ್ಲಗಳ ನಡುವೆ ನಾನು ನಟಿಯಾಗಿ ಬೆಳೆದೆ. ಹೀಗಿರುವಾಗ ನಾಯಕಿ ಪಾತ ಹಿನ್ನಲೆಗೆ ಸರಿದಿದ್ದರೂ ಕಥೆಯಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದ್ದೇನೆ ಎನ್ನುವ ಖುಷಿ ಇದೆ.

★ *ನಿಮಗೊಂದು ಹೆಸರು ಸಿಕ್ಕಾಗಿನ ದಿನಗಳನ್ನು ನೆನಪಿಸಿದರೆ...*

ನಾನು ಪ್ರೀತಿಗಾಗಿಯೂ ಅಷ್ಟು ದೀರ್ಘಕಾಲ ಕಾದಿರಲಿಲ್ಲ. ಆದರೆ ನಟನೆಗಾಗಿ ತುಂಬಾ ದೀರ್ಘಕಾಲ ಕಾದಿದ್ದೆ. ಪ್ರವೇಶ ಮಾಡಿದ್ದು ನೆನಪಿಸಿದರೆ ಕಾತುರದಿಂದ ಅಷ್ಟು ದಿನ ಕಾದ ದಿನಗಳು, ಸಿಕ್ಕ ಅವಕಾಶವನ್ನು ಬಳಸಿದ ಪರಿ ಎಲ್ಲವೂ ನೆನಪಾಗುತ್ತವೆ. ಏನೇ ಮಾಡಿದ್ದರೂ ಅದು ಮುಂದೆ ಮಾಡಬೇಕಾದ ಕೆಲಸ ತೀವ್ರತೆಯನ್ನು ಹೆಚ್ಚಿಸುತ್ತದೆ. ಮಾಡಿದ್ದು ಆದ ಮೇಲೆ ಮುಂದೆ ಏನು ಮಾಡಬೇಕು ಎನ್ನುವುದು ಖಾಲಿ ಇರುತ್ತದೆ ಅದನ್ನು ಮಾಡಬೇಕು. ನನಗೆ ಎಂದೂ ಏನೋ ಮಾಡಿಬಿಟ್ಟಿದ್ದೇನೆ ಎಂದು ಅನ್ನಿಸಿಯೇ ಇಲ್ಲ. ಯಾವತ್ತೂ ತಲೆ ಭುಜದ ಮೇಲೆಯೇ ಇದೆ. ನಿರ್ದೇಶಕ ಯೋಗರಾಜ ಭಟ್ಟರ ಒಂದು ಮಾತು ನೆನಪಿಗೆ ಬರುತ್ತಿದೆ. ‘ನೀವು ಹಿಂದೆ ಏನೇ ಮಾಡಿದ್ದರೂ ಅದು ಅಲ್ಲಿಗೆ ಮುಗಿಯಿತು. ಮುಂದೆ ಏನು ಅನ್ನುವುದು ಮಾತ್ರ ಮುಖ್ಯ’. ಹಿಂದಿನದ್ದು ಮುಗಿದ ಕಥೆ. ಮುಂದೆ ಮಾಡುವುದನ್ನು ನೆನಪಿಸಿದಾಗ ಕೌನ್ ಬನೆಗಾ ಕರೋಡ್‌ಪತಿಯಲ್ಲಿ ಟಕ್ ಟಕ್ ಎಂದು ಇಳಿಕೆ ಕ್ರಮದ ಆ ಮೂವತ್ತು ಸೆಕೆಂಡ್‌ಗಳ ಬಡಿತ ಈಗಲೂ ಮನಸ್ಸಿನಲ್ಲಿ ಮೂಡುತ್ತದೆ.

★ *ಸಮಯ– ಬದುಕನ್ನು ನಿಭಾಯಿಸಿದ ಪರಿ ಹೇಳಿ...*

ಅದು ದೊಡ್ಡ ವಿಷಯ ಅಲ್ಲ. ನೆರವಿಗೆ ಅಮ್ಮ ಇದ್ದರು. ಆದರೆ ನನ್ನ ಮಗ ಸಂಜೀವ್ ದೊಡ್ಡ ತ್ಯಾಗ ಮಾಡಿದ್ದಾನೆ. ನಾಲ್ಕು ವರ್ಷದ ಮಗುವನ್ನು ಬಿಟ್ಟು ಹೋಗುತ್ತಿದ್ದೆ. ತಾಯ್ತನ ಅನುಭವಿಸುವ ಸುಖ ಕಡಿಮೆಯಾಯಿತು. ಪುರುಷರಿಗೆ ಹೋಲಿಸಿದರೆ ಮಹಿಳೆ ಹೆಚ್ಚು ಕಿರಿಕಿರಿ ಅನುಭವಿಸುತ್ತಾಳೆ. ಆಕೆ ತನ್ನ 20ರಿಂದ 25ನೇ ವಯಸ್ಸಿನವರೆಗೆ ಓದಿಗೆ ಕಳೆದರೆ, ಅಷ್ಟರಲ್ಲಿ ಮದುವೆ ಪ್ರವೇಶ ಮಾಡುತ್ತದೆ. ಅವಳದೇ ಆದ ಉದ್ಯೋಗ ಎರಡನೇ ಆಯ್ಕೆಯಾಗುತ್ತದೆ. 30ರ ಆಸುಪಾಸಿನಲ್ಲಿಯೇ ತಾಯ್ತನವನ್ನೂ ಅನುಭವಿಸಬೇಕು. ಇಲ್ಲದಿದ್ದರೆ ಮತ್ತೊಂದು ಸಮಸ್ಯೆ. ಕಾಲಕಾಲಕ್ಕೆ ಎಲ್ಲಾ ಆದರೂ ಅರ್ಧಮರ್ಧ ಅನಿಸುತ್ತದೆ.

■ ರಾಘವೇಂದ್ರ